# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

ಪರೀಕ್ಷಾ ವಿಭಾಗ

ಫೋನ್ ನಂ. :0831-2565207/8762679237
ಫ್ಯಾಕ್ಸ್ : 0831-2565240

Website: www.rcub.ac.in
E-mail: rcuregev@gmail.com


ರಾಚವಿಬೆ/ಪರೀಕ್ಷಾ ವಿಭಾಗ/2020-21/ 4873 ದಿನಾಂಕ: 18-03-2021

## ಘಟಿಕೋತ್ಸವ ಅಧಿಸೂಚನೆ

**ವಿಷಯ: 2019-20 ನೇ ಸಾಲಿನ 9ನೇ ಘಟಿಕೋತ್ಸವದ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು / ನಿರ್ದೇಶಕರು / ಡೀನರು ಗಳಿಗೆ ಈ ಮೂಲಕ ತಿಳಿಸುವುದೇನೆಂದರೆ 2019-20 ಸಾಲಿನ 9ನೇ ಘಟಿಕೋತ್ಸವವನ್ನು ಎಪ್ರಿಲ್ / ಮೇ 2021 ತಿಂಗಳಿನಲ್ಲಿ ನಡೆಸಲು ಯೋಜಿಸಲಾಗಿದೆ, ಸದರಿ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಹಾಗೂ 2010-11 ರಿಂದ 2018-19 ಸಾಲಿನವರೆಗೆ ಘಟಿಕೋತ್ಸವ ಅರ್ಜಿಗಳನ್ನು ಸಲ್ಲಿಸದೆ ಇರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಸದರಿ ಮಾಹಿತಿಯನ್ನು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಿ ಘಟಿಕೋತ್ಸವ ಅರ್ಜಿಗಳನ್ನು ಸಲ್ಲಿಸಲು ಈ ಮೂಲಕ ತಮಗೆ ಸೂಚಿಸಲಾಗಿದೆ.

| ಅರ್ಜಿ ಸಲ್ಲಿಸುವ ವೇಳಾಪಟ್ಟಿ | | |
|---|---|---|
| ಕ್ರ ಸಂ | ವಿವರಣೆ | ದಿನಾಂಕ |
| 1 | ವಿದ್ಯಾರ್ಥಿಗಳು ಘಟಿಕೋತ್ಸವ ಅರ್ಜಿಗಳನ್ನು ಸ್ಟೂಡೆಂಟ್ ಪೋರ್ಟಲ್‌ನಲ್ಲಿ ತುಂಬುವುದು. (ದಂಡರಹಿತ) | 18.03.2021 -10.04.2021 |
| 2 | ವಿದ್ಯಾರ್ಥಿಗಳು ಘಟಿಕೋತ್ಸವ ಅರ್ಜಿಗಳನ್ನು ಸ್ಟೂಡೆಂಟ್ ಪೋರ್ಟಲ್‌ನಲ್ಲಿ ತುಂಬುವುದು. (ಪ್ರತಿ ದಿನಕ್ಕೆ 100/-ರೂ. ದಂಡದೊಂದಿಗೆ) | 11.04.2021 -17.04.2021 |

| ಶುಲ್ಕ ವಿವರ | | | |
|---|---|---|---|
| ಕ್ರ ಸಂ | ವಿವರಣೆ | ಸ್ವದೇಶಿ ವಿದ್ಯಾರ್ಥಿಗಳಿಗೆ | ವಿದೇಶಿ ವಿದ್ಯಾರ್ಥಿಗಳಿಗೆ |
| 1 | ಘಟಿಕೋತ್ಸವ ಅರ್ಜಿ ನಮೂನೆ ಶುಲ್ಕ | ರೂ 100/- | ರೂ 1000/- |
| 2 | ಘಟಿಕೋತ್ಸವ ಶುಲ್ಕ (ಅನುಪಸ್ಥಿತಿ) | ರೂ 960/- | ರೂ 9600/- |
| 3 | ಪರಿಶೀಲನ ಶುಲ್ಕ (ಹಳೆಯ ವಿದ್ಯಾರ್ಥಿಗಳಿಗೆ ಮಾತ್ರ) | ಪ್ರತಿ ಘಟಿಕೋತ್ಸವಕ್ಕೆ ರೂ 100/- ರಂತೆ | ಪ್ರತಿ ಘಟಿಕೋತ್ಸವಕ್ಕೆ ರೂ 100/- ರಂತೆ |

P.T.O.

ಸೂಚನೆಗಳು:

01. ವಿದ್ಯಾರ್ಥಿಗಳು ಘಟಿಕೋತ್ಸವ ಅರ್ಜಿಗಳನ್ನು ಸ್ಟೂಡೆಂಟ್ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದು.
02. ವಿದ್ಯಾರ್ಥಿಗಳು ಮೊಬೈಲ್ ನಂ ಹಾಗೂ ಇ-ಮೇಲ್ ಐಡಿಯೊಂದಿಗೆ ಸ್ಟೂಡೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದು. ಸ್ಟೂಡೆಂಟ್ ಪೋರ್ಟಲ್ ವಿಳಾಸ **studentportal.universitysolutions.in**
03. 2019-20 ಸಾಲಿಗಿಂತ ಹಿಂದಿನ ವಿದ್ಯಾರ್ಥಿಗಳು ಸಹ ಈ ಹಿಂದೆ ಘಟಿಕೋತ್ಸವ ಅರ್ಜಿಯನ್ನು ಸಲ್ಲಿಸದೆ ಇದ್ದಲ್ಲಿ, ಸಲ್ಲಿಸಬಹುದು.
04. ವಿದ್ಯಾರ್ಥಿಗಳು ಶುಲ್ಕವನ್ನು ಪಾವತಿ ಮಾಡುವುದಕ್ಕೆ ಮುಂಚಿತವಾಗಿ ಎಲ್ಲಾ ಮಾಹಿತಿಗಳ ನಿಖರತೆಯನ್ನು ಖಾತರಿಪಡಿಸಿಕೊಂಡು ಸ್ಟೂಡೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪೆಮೆಂಟ್ ಸೌಲಭ್ಯವನ್ನು ಬಳಸಿಕೊಂಡು ಹಣ ಪಾವತಿಸಬಹುದು. ವಿದ್ಯಾರ್ಥಿಗಳು ಒಮ್ಮೆ ಮಾತ್ರ ಶುಲ್ಕವನ್ನು ಪಾವತಿಸಬೇಕು ಹಾಗೂ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲು ಅವಕಾಶವಿರುವುದಿಲ್ಲ.
05. ಅಧಿಸೂಚನೆಯಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
06. ತಾಂತ್ರಿಕ ಸಮಸ್ಯೆಗಳಿಗೆಈ ಕೆಳಕಂಡ ಸಹಾಯವಾಣಿಗೆ ಸಂಪರ್ಕಿಸುವುದು.

| | |
|---|---|
| ದೂರವಾಣಿಸಂಖ್ಯೆ | : 0831-2565238 / 0831-2565237 / 0831-2565227 |
| ಮೊಬೈಲ್ ಸಂಖ್ಯೆ | : 6363739741 / 6363724540 |
| ಈ-ಮೇಲ್ | : rcub.logisys@gmail.com |

18/3

ಕುಲಸಚಿವರು (ಮೌಲ್ಯಮಾಪನ)
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಇವರಿಗೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವ ಬೆಳಗಾವಿ, ವಿಜಯಪುರ, ಬಾಗಲಕೋಟೆ ಜಿಲ್ಲೆಗಳ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳು / ನಿರ್ದೇಶಕರು / ಡೀನರು.

ಮುಂದಿನ ಕ್ರಮಕ್ಕಾಗಿ:

1 ಪರೀಕ್ಷಾ ವಿಭಾಗದ ಕಂಪ್ಯೂಟರ್ ವಿಭಾಗ.

ಮಾಹಿತಿಗಾಗಿ:

1 ಕುಲಸಚಿವರು / ಉಪ-ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2 ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
3 ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
4 ನಿರ್ದೇಶಕರು, ಸಿ.ಡಿ.ಸಿ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
5 ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ವಿಜಯಪುರ / ಬಾಗಲಕೋಟೆ / ಜಮಖಂಡಿ.
6 ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯ, ಬೆಳಗಾವಿ.
7 ಕಛೇರಿ ರಕ್ಷಾ ಪ್ರತಿ.